**ಓ.ಎಸ್. ನಂಃ 146/2021**

**ಡಿ. ಡಬ್ಲ್ಯೂಃ 1**

**ದಿನಾಂಕ 21.11.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿಯ ಪರ ಃ ಶ್ರೀ.ಟಿಜಿ. ವಕೀಲರಿಂದಃ**

9. ನಿಡಿ.1 ರ ದಾಖಲೆಯನ್ನು ನಾನೇ ತಂದಿರುತ್ತೇನೆ. ನಿಡಿ.1 ರ ದಾಖಲೆ ಆಗುವ ಕಾಲಕ್ಕೆ ನನ್ನ ತಾಯಿಯಾದ ನಿಂಗಮ್ಮರವರು ಬದುಕಿದ್ದರು. ನನ್ನ ತಾಯಿಯಾದ ನಿಂಗಮ್ಮರವರು ನಿಡಿ.1 ರ ದಾಖಲೆಗೆ ಪಕ್ಷಗಾರರಲ್ಲ ಎಂದರೆ ಸರಿ. ಅದೇ ರೀತಿ ಪ್ರತಿವಾದಿ ಸಂಖ್ಯೆ 4 ಮತ್ತು 6 ರವರು ಸಹ ನಿಡಿ.1 ರ ದಾಖಲೆಗೆ ಪಕ್ಷಗಾರರಲ್ಲ ಎಂದರೆ ಸರಿ. ನಿಡಿ.1 ರ ದಾಖಲೆಗೆ ವಾದಿಯರು ತಮ್ಮ ಸಹಿ ಆಗಲೀ ಅಥವಾ ಹೆಬ್ಬೆಟ್ಟಿನ ಗುರುತು ಮಾಡಿರುವುದಿಲ್ಲ ಎಂದರೆ ಸರಿ.

10. ದಾವಾ ಐಟಂ ನಂ.1 ರ ಆಸ್ತಿಯನ್ನು ಹೊರತುಪಡಿಸಿ ಉಳಿದ ಎಲ್ಲಾ ದಾವಾ ಆಸ್ತಿಗಳು ಸಹ ವಾದಿಯರ ತಾತನಾದ ಕಾಳೇಗೌಡರ ಹೆಸರಿನಲ್ಲಿಯೇ ಇರುತ್ತದೆ ಎಂದರೆ ಸರಿ. ನಿಡಿ.1 ರ ದಾಖಲೆಯ ಆಧಾರದ ಮೇಲೆ ನಿಡಿ.1 ರ ಪಕ್ಷಗಾರರ ಹೆಸರಿಗೆ ಆಯಾ ಆಸ್ತಿಗಳು ಖಾತೆ ವರ್ಗಾವಣೆ ಆಗಿರುವುದಿಲ್ಲ ಎಂದರೆ ಸರಿ. ನಿಡಿ.1 ರ ಪ್ರಕಾರ ಆಯಾ ಪಕ್ಷಗಾರರಿಗೆ ಆಸ್ತಿಗಳ ಖಾತೆ ವರ್ಗವಣೆ ಆಗದಿರುವ ಕಾರಣ ದಾವಾ ಆಸ್ತಿಗಳೆಲ್ಲವೂ ಸಹ ಇಂದಿಗೂ ಜಂಟಿ ಕುಟುಂಬದ ಆಸ್ತಿಗಳಾಗಿ ಮುಂದುವರೆಯುತ್ತಿದೆ ಎಂದರೆ ಸರಿ.

11. ವಾದಿಯರ ಸಹಿಗಳನ್ನು ಫ್ರೋರ್ಜರಿ ಮಾಡಿ ನಿಡಿ.1 ರ ದಾಖಲೆಯನ್ನು ನಾವು ಸೃಷ್ಟಿಸಿದ ಕಾರಣ ಅದರ ಆಧಾರದ ಮೇಲೆ ಯಾವುದೇ ಖಾತೆ ವರ್ಗಾವಣೆ ಆಗಿರುದಿಲ್ಲ ಎಂದರೆ ಸರಿಯಲ್ಲ. ನಿಡಿ.1 ರ ದಾಖಲೆಗೆ ಕಾನೂನಿನಡಿಯಲ್ಲಿ ಯಾವುದೇ ಮಾನ್ಯತೆ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**